# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ
ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/೨೪೬/2021-22. ದಿನಾಂಕ : 08-10-2021

ದಿನಾಂಕ: 05-10-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀಮತಿ. ಶಿಲ್ಪ.ಎನ್ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಶ್ರೀ.ಪಿ.ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು | 9964177663 |
| 4 | ಶ್ರೀಮತಿ. ಅಂಬಿಕಾ ಕೃಷ್ಣ | ವಿ.ವಿ.ಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | 9845237061 |
| 5 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 6 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 7 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 8 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

ದಿನಾಂಕ: 05-10-2021 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲು ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ರಾಜು ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸಿ ಕ್ರಮ ಕೈಗೊಳ್ಳುವಂತೆ ಕೋರಿದರು. ಅವುಗಳೆಂದರೆ.

1. ಬಸವನಗುಡಿ ವ್ಯಾಪ್ತಿಯಲ್ಲಿನ ಕನ್ಸರ್‌ವೆನ್ಸಿಗಳಿಗೆ ಗೇಟ್‌ಗಳನ್ನು ಹಾಕಿಕೊಂಡು ಮತ್ತು ರಸ್ತೆಗಳನ್ನು (ಕನ್ಸರ್‌ವೆನ್ಸಿ) ಗಾರ್ಡನ್‌ಗಳನ್ನಾಗಿ ಮಾಡಿಕೊಂಡು ಒತ್ತುವರಿ ಮಾಡಿಕೊಂಡಿರುವುದರಿಂದ ಒಳಚರಂಡಿ ಸಂಪರ್ಕಕ್ಕೆ ತುಂಬಾ ತೊಂದರೆಯುಂಟಾಗುತ್ತಿರುವುದು.
2. ಶ್ರೀ.ರಾಮ ಮಂದಿರ ರಸ್ತೆಯ ಕನ್ಸರ್‌ವೆನ್ಸಿಯಲ್ಲಿರುವ ಹಸುಗಳನ್ನು ತೆರವುಗೊಳಿಸುವುದು.
3. ಆರ್.ವಿ.ರಸ್ತೆ ಟೀಚರ್ಸ್ ಕಾಲೇಜ್ ಬಳಿ ಬಸ್ ಶೆಲ್ಟರ್ ಅನ್ನು ನಿರ್ಮಿಸುವುದು.
4. ಎಂ.ಎನ್.ಕೃಷ್ಣರಾವ್ ರಸ್ತೆ ಪಾದಚಾರಿ ಮಾರ್ಗದಲ್ಲಿ ವಾಹನಗಳು ಸಂಚರಿಸದಂತೆ ಬೋಲಾರ್ಡ್‌ಗಳನ್ನು ಅಳವಡಿಸುವುದು.
5. ನ್ಯಾಷನಲ್ ಹೈ ಸ್ಕೂಲ್ ಮೇಲುಸೇತುವೆ ಕೆಳಗೆ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ತೆರವುಗೊಳಿಸುವುದು.
6. ಕೆ.ಆರ್. ರಸ್ತೆಯ ಪಾದಾಚಾರಿ ಮಾರ್ಗದಲ್ಲಿರುವ ನರ್ಸರಿಯನ್ನು ತೆರವುಗೊಳಿಸುವುದು.
7. ಬಸವನುಡಿ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ. ಗಳು ಬೇಕಾಗಿರುವ ಬಗ್ಗೆ ಚರ್ಚೆ.
8. ಸರ್ವೇಯರ್ ರಸ್ತೆ ಕನ್ಸರ್‌ವೆನ್ಸಿಯಲ್ಲಿರುವ ಅಂಬಾ ಭವಾನಿ ನಾನ್ ವೆಜ್ ಹೋಟಲ್ ತೆರವುಗೊಳಿಸುವ ಬಗ್ಗೆ.

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ದಿನಾಂಕ: 12-10-2021 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ.ರಾಮ ಮಂದಿರ ರಸ್ತೆಯ ಕನ್ಸರ್‌ವೆನ್ಸಿಯಲ್ಲಿರುವ ಹಸುಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳುವಂತೆ ಮತ್ತು ಕನ್ಸರ್‌ವೆನ್ಸಿ ಒತ್ತುವರಿ ಮಾಡಿ ಗೇಟ್‌ಗಳನ್ನು ಅಳವಡಿಸಿಕೊಂಡಿವವರಿಗೆ ನೋಟೀಸ್‌ಗಳನ್ನು ನೀಡುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಸಿ.ವಿ.ಜಯಕುಮಾರ್ ರವರು ಮಾತನಾಡಿ ವಾಣಿ ವಿಲಾಸ್ ರಸ್ತೆ ನ್ಯಾಷನಲ್ ಹೈ ಸ್ಕೂಲ್ ಮೇಲುಸೇತುವ ರಸ್ತೆ ತುಂಬಾ ಹಾಳಾಗಿ ಗುಂಡಿಗಳು ಹೆಚ್ಚಾಗಿದ್ದು, ವಾಹನ ಸವಾರರಿಗೆ ತೊಂದರೆಯಾಗಿತ್ತಿದ್ದು, ಈ ಸಂಬಂಧ ಛಾಯಾಚಿತ್ರಗಳನ್ನು ತೆಗೆದು ಕಳುಹಿಸಿದ್ದರಿಂದ ಕೂಡಲೇ ಸ್ಪಂದಿಸಿ ಹೊಸದಾಗಿ ಡಾಂಬರೀಕರಣ ಮಾಡಿರುವುದನ್ನು ಸಭೆ ಗಮನಕ್ಕೆ ತಂದು, ಅಭಿನಂದನೆಯನ್ನು ತಿಳಿಸಿದರು. ಮಾತು ಮುಂದುವರೆಸಿ ಆಂಜನೇಯ ದೇವಸ್ಥಾನದ ರಸ್ತೆಯಲ್ಲಿ ಕಲ್ಲುಗಳನ್ನು ತೆರವುಗೊಳಿಸಿ ಸ್ವಚ್ಛ ಮಾಡಿಕೊಡುವಂತೆ ಮತ್ತು ಹಸು ಸಾಕಾಣಿಕೆಗಾರರಿಗೆ ಸಾಗಣೆಯನ್ನು ವರ್ಮಿಕಾಂಪೋಸ್ಟ್‌ಗಾಗಿ ಲಾಲ್

ಬಾಗ್ ನೀಡುವ ಸಂಬಂಧ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. ಈ ವಿಚಾರವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡಿನ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ನೋಡಲ್ ಅಧಿಕಾರಿರವರು ಸೂಚಿಸಿದರು.

ನಂತರ ಎಂ.ಎಂ.ವಿ. ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ವೆಂಕಟೇಶ್ ರವರು ಮಾತನಾಡಿ ಡಯಾಗನಲ್ ರಸ್ತೆಯಲ್ಲಿ ಚರಂಡಿ ಮೇಲಿನ ಹಾಸುಕಲ್ಲು (ಚಪ್ಪಡಿ) ಗಳನ್ನು ಸರಿಯಾಗಿ ಹಾಕದೇ ಇರುವುದರಿಂದ ಪಾದಚಾರಿಗಳಿಗೆ ನಡೆಯಲು ಬಹಳ ತೊಂದರೆಯುಂಟಾಗಿರುವುದಾಗಿ ಸಭೆಯ ಗಮನಕ್ಕೆ ತಂದರು. ಈ ವಿಚಾರವಾಗಿ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಮೇಜರ್ ರೋಡ್‌ನ ಸಹಾಯಕ ಅಭಿಯಂತರರಾದ ಶ್ರೀ. ಸುಮ ರವರೊಂದಿಗೆ ಚರ್ಚಿಸಿ ಸರಿಪಡಿಸುವಂತೆ ಕೋರುವುದಾಗಿ ಸಭೆಗೆ ತಿಳಿಸಿದರು.

ನಂತರ ಮಾತು ಮುಂದುವರೆಸಿ ಎಂ.ಎಂ.ವಿ. ರಸ್ತೆ ಹಾಗೂ ನ್ಯಾಷನಲ್ ಹೈ ಸ್ಕೂಲ್ ರಸ್ತೆಗಳು ಸೇರುವ ಸ್ಥಳ ವಾಸವಿ ದೇವಸ್ಥಾನ ರಸ್ತೆ, ಎಂ.ಎಂ.ವಿ.ರಸ್ತೆಗಳು ಸೇರುವ ಸ್ಥಳಗಳಲ್ಲಿ ಸಿ.ಸಿ.ಟಿ.ವಿ.ಅಳವಡಿಸುವಂತೆ ಕೋರಿದರು. ಈ ವಿಚಾರವಾಗಿ POW ಕಾಮಗಾರಿಗಳಲ್ಲಿ ಅನುದಾನ ಪಡೆದು ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಹಾಕಲು ಸೂಕ್ತ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಕಿರಿಯ ಅಭಿಯಂತರರಿಗೆ ಸೂಚಿಸಿದರು. ಮುಂದುವರೆದು ನ್ಯೂ ಹೈ ಸ್ಕೂಲ್ ರಸ್ತೆ ಮತ್ತು ಜೈನ್ ಟೆಂಪಲ್ ರಸ್ತೆಗಳ ಅಕ್ಕಪಕ್ಕ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು, ಅವುಗಳನ್ನು ತಪ್ಪಿಸಬೇಕೆಂದು ಕೋರಿದರು. ಈ ಸಂಬಂಧ ಪಶುಸಂಗೋಪನಾ ಇಲಾಖೆ ಅಧಿಕಾರಿಗಳನ್ನು ಕ್ರಮ ವಹಿಸುವಂತೆ ಕೋರುವುದಾಗಿ ನೋಡಲ್ ಅಧಿಕಾರಿಗಳು ತಿಳಿಸಿದರು. ಪುನಃ ಶ್ರೀ.ವೆಂಕಟೇಶ್ ರವರು ಮಾತನಾಡಿ ಕೆ.ಆರ್. ರಸ್ತೆಯ ಪಾಲಿಕೆ ಜಾಗದಲ್ಲಿ ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಿಸಲು ಗುದ್ದಲಿ ಪೂಜೆ ನೆರವೇರಿಸಿದ್ದು, ಸದರಿ ಸ್ಥಳದಲ್ಲಿ ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಿಸಬಾರದೆಂದು ಮಾನ್ಯ ಶಾಸಕರು, ಮುಖ್ಯ ಆಯುಕ್ತರು, ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರುಗಳಿಗೆ ಮನವಿ ಪತ್ರ ನೀಡಿರುವುದಾಗಿ ಸಭೆಯ ಗಮನಕ್ಕೆ ತಂದರು. ಈ ವಿಷಯವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಚಿಕ್ಕಪೇಟೆ ವಿಭಾಗ ರವರೊಂದಿಗೆ ಚರ್ಚಿಸುವುದಾಗಿ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ಮಾಜಿ ಪಾಲಿಕೆ ಸದಸ್ಯರಿಗೆ ಸಾರ್ವಜನಿಕರು ದೂರನ್ನು ನೀಡಿ ದೊಡ್ಡ ಮಾವಳ್ಳಿಯ ಎಲ್.ಬಿ.ಎಫ್. ರಸ್ತೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯವನ್ನು ಬೇರೆಡೆ ಸ್ಥಳಾಂತರ ಮಾಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ. ಸದರಿ ಗ್ರಂಥಾಲಯವು ಇರುವುದಾಗಿ ತಿಳಿಸಿರುತ್ತಾರೆ. ಏಕೆಂದರೆ ಸದರಿ ಗ್ರಂಥಾಲಯ ಇರುವ ಸ್ಥಳವು ಭಾರಿ ವಾಹನ ಸಂಚಾರ ದಟ್ಟಣೆ ಮತ್ತು ಅಕ್ಕಪಕ್ಕದಲ್ಲಿ ಕೋರಿ ಅಂಗಡಿಗಳಿದ್ದು ಗ್ರಂಥಾಲಯದಲ್ಲಿ ಓದಲು ತುಂಬಾ ತೊಂದರೆ ಉಂಟಾಗುತ್ತಿರುವುದಾಗಿ ತಿಳಿಸಿದರು. ಆದುದರಿಂದ ಮಾವಳ್ಳಿಯ ಎಸ್.ಕೆ. ಲೇನ್ ನಲ್ಲಿ ಹೊಸದಾಗಿ ಪಾಲಿಕೆ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ಸ್ಥಳಾಂತರಿಸುವಂತೆ ಕೋರಿದರು. ಈ ಸಂಬಂಧ ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಕಿರಿಯ ಅಭಿಯಂತರರಿಗೆ ಸೂಚಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)